1299 34 ಈ। 4—5—51

SATYAVADI

ಸತ್ಯವಾದಿ

ಸಂಪಾದಕರು- ಅರಮನೆ ಸಿಬಸ್ಟೆದಾರ್ ಎಂ. ವಿ. ಸುಬ್ಬಾಯುರು | ಬಿಡಿ ಪ್ರತಿ 3 ಪೈ

ಫ್ರಂಟಿನ ರದ್ದಾಯಿತಿಯಿಂದ ಕಾಂಗ್ರೆಸ್ ಐಕ್ಯತೆ ಆಗುವುದಿಲ್ಲ ?

ನಿನ್ನೆ ನವದೆಹಲಿಯಲ್ಲಿ ಸಮಾವೇಶಗೊಂಡಿದ್ದ ಕಾಂಗ್ರೆಸ್ ಡೆಮೊಕ್ರಾಟಿಕ್ ಫ್ರಂಟ್ ನಿರ್ಣಯ ಅಂಗೀಕರಿಸಿ, ಫ್ರಂಟಿನ ರದ್ದಾಯಿತಿಯಿಂದ ಕಾಂಗ್ರೆಸಿನಲ್ಲಿ ಸ್ವತ್ಯೇಕ ಮನೋಭಾವ ರೂಪುಗೊಳ್ಳುವುದು ಅದರ ಹೊಣೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮೇಲೆಯೇ ಇದೆ ಎಂದು ತಿಳಿಸಿದೆ

ಫ್ರಂಟ್ ರದ್ದಾಯಿತಿಯಿಂದ ಕಾಂಗ್ರೆಸ್ ಐಕ್ಯ ಸಾಧ್ಯವೆಂದು ಪಂ|| ನೆಹರು ಮತ್ತು ಅಜಾದರ ಅಭಿಪ್ರಾಯ

ಸಹಗಮನ ಕೈವಿಾರಿದ್ದು

ಭಾರತದಲ್ಲಿ ಈಗೀಗ ಸಂಭವಿಸಿದ ಸಹಗಮನ ಪೋಲೀಸಂ ಕೈ ವಿಾರಿ ಜರುಗಿದ ಘಟನೆಗಳು ಎಂದು ಭಾರತ ಸರಕಾರ ತಿಳಿಸಿದೆ. ಒಂದೆಡೆ ಸಹಗಮನ ನಡೆದಾಗ ಪೋಲಿಸರು ಶಕ್ತಿವಿಾರಿ ತಪ್ಪಿಸ ಯತ್ನ ಮಾಡಲು ನಾನೂರು ಮಂದಿ ಪೋಲೀಸಂ ಮೇಲೆ ಬೀಳಲು, ಪೋಲೀಸರು ಗುಂಡು ಹಾರಿಸಲು 2 ಸಾವುಗಳು ಆದುವು

ಬಾಲಕನ ಕಾಣಿಕೆ

ಭಾರತ ಪ್ರತಿನಿಧಿ ಸರ್ ಬಿ. ಎನ್ ರಾವ್‌ರ ಹಸ್ತದಲ್ಲಿ ನೊಸ್ಸೆ ನ್ಯೂಯಾರ್ಕಿನ 9 ವರ್ಷದ ಜಾಕ್ ಮ್ಯುರಾಸ್ಟಿಕ್ ಎಂಬವನು ತನ್ನ ಒಂದೂವರೆ ಡಾಲರ್ ವಾರದ ಉತ್ಪನ್ನದಲ್ಲಿ ಒಂದು ಡಾಲರನ್ನು ಧಾನ್ಯಕ್ಕೆಂದು ಕೊಟ್ಟನು. ಭಾರತಕ್ಕೆ ಅವೇರಿಕ ರಾಯಭಾರಿಯಾಗಿ ಎಂದು ಸರ್ ರಾವ್ ಅವನನ್ನು ಆಶೀರ್ವದಿಸಿದರು.

ಕಾಂಗ್ರೆಸ್ ಬಗ್ಗೆ ಆಕ್ಷೇಪ

ಅಖಿಲ ಭಾರತ ದಲಿತ ವರ್ಗ ಮಹಾಮಂಡಲದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಪಿ. ಎನ್. ರಾಜಭೋಜರು ಕೊಲ್ಹಾಪುರದಲ್ಲಿ ಹೇಳಿಕೆ ಇತ್ತು, ಕಾಂಗ್ರೆಸಿನಲ್ಲಿ ದಲಿತ ವರ್ಗಕ್ಕೆ ಸಾಕಷ್ಟು ಪ್ರಾತಿನಿಧ್ಯವಿಲ್ಲವಾದ್ದರಿಂದ, ಹಿತಸಂರಕ್ಷಣೆ ಭರವಸೆ ಕೊಡುವ ರಾಜಕೀಯ ಪಕ್ಷ ದೊಡನೆ ಚುನಾವಣೆಯಲ್ಲಿ ಸಹಕರಿಸುವದೆಂದು ತಿಳಿಸಿರುವರು.

ಸರ್ಕಾರಿ ಪ್ರಕಟಣೆ

ಮೈಸೂರು ಸರ್ಕಾರ ಪ್ರಕಟಣೆಯನ್ನಿತ್ತು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ 511 ಕೆರೆಗಳ ಅಚ್ಚುಕಟ್ಟಿನಲ್ಲಿ 50-51 ನೇ ಸಾಲಿನಲ್ಲಿ ಮಳೆಬಾರದೆ ಫಸಲು ಕೆಟ್ಟಿದ್ದರಿಂದ ಅರ್ಧ ತೆರಿಗೆ ಅಂದರೆ ರೂ. 25818-3-೫ ನ್ನು ಸ್ಥಾಪಿಸಿರುವುದಾಗಿ ತಿಳಿಸಿದೆ.

ಮಸೂದೆ ಮಾಡಿರಿ

ಭಾರತ - ಪಾಕಿಸ್ತಾನಗಳ ಅಲ್ಪಸಂಖ್ಯಾತ ಸಚಿವರು ಮೊನ್ನೆ ಕಲ್ಕತ್ತೆಯಲ್ಲಿ ಸೇರಿ ಬಲಾತ್ಕಾರ ಮತಾಂತರ ನಿಷೇಧಿಸಲು ಶಾಸನವನ್ನು ಜಾರಿಗೆ ತರಲು ತಂತಮ್ಮ ರಾಜ್ಯಕ್ಕೆ ಸಲಹೆ ಕೊಡಬೆ ಕೆಂದು ನಿರ್ಣಯಿಸಿದರು.

ಸರಸ್ವತಿ ಪೂಜೆ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಶಾಖೆಯಲ್ಲಿ ಮೊನ್ನೆ ಸಂಜೆ ಪುರಪತಿ ಶ್ರೀ ಟಿ ನರಸಿಂಹಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಸರಸ್ವತಿ ಪೂಜಾ ಮಹೋತ್ಸವ ನೆಂವೇರಿತು.

ಷರತ್ತಿರಲಿ !

ಷರತ್ತುಗಳಾವವೂ ಇಲ್ಲದೆ ನಿವೃತ್ತ ರಾಷ್ಟ್ರಾಧಿಪರಿಗೆ ವಿರಾಮ ವೇತನ ಕೊಡಲಾಗದೆಂದು ಮಾನ್ಯ ಸಭ್ಯರು ಹಲವರು ಆ ಸಂಬಂಧ ಮಸೂದೆ ಬಗ್ಗೆ ದೆಹಲಿ ಪಾರ್ಲಿಮೆಂಟಿನಲ್ಲಿ ತಮ್ಮ ಅಭಿಪ್ರಾಯ ತಿಳಿಸಿದರು. ರೂ 15 ಸಹಸ್ರ ವಿರಾಮ ವೇತನ ವರ್ಷಕ್ಕೆ ಕೊಡಬೇಕೆಂಬ ಮಸೂದೆ ಒಪ್ಪಿತವಾಯಿತು

ಮಸೂದೆಗೆ ಒಪ್ಪಿಗೆ

ರವೀಂದ್ರರ ವಿಶ್ವಭಾರತಿ ವಿಶ್ವವಿದ್ಯಾನಿಲಯ ಬಗ್ಗೆ ಭಾರತ ಪಾರ್ಲಿಮೆಂಟು ನಿನ್ನೆ ಮಸೂದೆಗೆ ಸಮ್ಮತಿಸಿತು.

ಭಿಕ್ಷುಕಿ ಬಿಕ್ಷೆ ನೀಡಿದಳು

ಇಂದೂರಿನ ಭಿಕ್ಷುಕಿ ತಾನು ಸಂಗ್ರಹಿಸಿದ ಭಿಕ್ಷವನ್ನು ಬಿಹಾರ ಬರಪೀಡಿತರಿಗಾಗಿ ನಿನ್ನೆ ಕೊಟ್ಟಳು !

ಸುಖವಾಗಿದ್ದಾರೆ

ಇರಾಕ್‌ನಲ್ಲಿರುವ ಭಾರತೀಯರು ಅಲ್ಲಿಯ ಯಾವುದೇ ಪರಿಸ್ಥಿತಿಗೂ ಸಿದ್ಧರಾಗಿದೆ ಸುಖವಾಗಿರುವುದೆಂದು ದೆಹಲಿಯ ವಾರ್ತೆಯಿಂದು ತಿಳಿಸುತ್ತದೆ.

ಹೊಂದಾಣಿಕೆ

ಬಂಗಾಲ-ಸೇಟಿ ಹಿಂದೂ-ಮುಸ್ಲಿಂಗಳು ಇದೀಗ ಪರಸ್ಪರ ಹೊಂದಾಣಿಕೆಯಿಂದಿದ್ದಾರೆ.

ಸತ್ಯಾಗ್ರಹ ಬೆದರಿಕೆ

ಕೂಚ್‌ಬಿಹಾರ್ ಜನತಾ ಕ್ರಿಯಾ ಸಮಿತಿ ಸರ್ಕಾರಕ್ಕೆ ತಿಳಿಗಳಿಕೆ ಇತ್ತು ನಾಳೆಯೊಳಗೆ ಗುಂಡಿಕ್ಕಿದ ಅಧಿಕಾರಿಗಳನ್ನು ನೌಕರಿಯಿಂದ ಕಿತ್ತೊಗೆಯಬೇಕೆಂದು ಸೂಚಿಸಿದೆ. ಇಲ್ಲವೇ ಸತ್ಯಾಗ್ರಹ ಪ್ರಾರಂಭ.

ಹಾಕ್‌ಗೆ ಬಟ್ಟೆ

ಭಾರತದಿಂದ ಪಾಕಿಸ್ತಾನಕ್ಕೆ ಈ ಸಾಲಿಗೆ ರೂ 4 ಕೋಟಿ 40 ಲಕ್ಷ ಬೆಲೆಯ ಬಟ್ಟೆ ಕಳುಹಲಾಗುವದು.

ಯುದ್ಧ ಪ್ರಾರಂಭ

ಟೆಲ್‌ಅವಿವ್ ಸುದ್ದಿ ಪ್ರಕಾರ ಸಿರಿಯ ಮತ್ತು ಇಸ್ರೇಲ್‌ಗಳಲ್ಲಿ ನಿನ್ನೆಯಿಂದ ಭೀಕರ ಕಾಳಗ ಆರಂಭವಾಗಿದೆ ಗಡಿ ನಿಯಮವನ್ನು ಉಲ್ಲಂಘಿಸಿದೆಯೆಂದು ಸಿರಿಯ ಮೇಲೆ ಇಸ್ರೇಲ್ ವಿಶ್ವಸಂಸ್ಥೆಗೆ ದೂರಿತ್ತಿದೆ.

ನೂತನ ಪಕ್ಷ

ಹಿಂದೂಸ್ತಾನ್ ಹನುಮಾರ ಎಂಬ ರಾಜಕೀಯ ಪಕ್ಷ ನೂತನವಾಗಿ ಪಾಕಿಸ್ತಾನದಲ್ಲಿ ಜನಿಸಿದೆ ಈ ಪಕ್ಷ ಹಿಂದೂಗಳಿಂದ ಇತರ ಮತಗಳನ್ನು ರಕ್ಷಿಸಿ ಭಾರತಾದ್ಯಂತ ಶಾಂತಿ ಪ್ರಸಾರ ಮಾಡುವ ಉದ್ದೇಶ ಪಡೆದಿದೆ

ಸ್ಪೇನ್ ಪರಿಸ್ಥಿತಿ

ಅಂತರ್ಯುದ್ಧದ ಭೀತಿ ಸ್ಪೇನಲ್ಲಿ ತಲೆದೋರಿದೆಯೆಂದು ಲಂಡನ್ ವಾರ್ತೆ. 5 ಲಕ್ಷ ಮಂದಿ ಕಾರ್ಮಿಕರ ಮುಷ್ಕರವನ್ನು ನಿರೀಕ್ಷಿಸಲಾಗಿದೆ ಅಧಿಕಾರಿಗಳು ಪೇನೆಯವರು ಫ್ರಾಂಕೋವನ್ನು ಧಿಡಿಯಲು ಎಂದು ಹೀಯಾಳಿಸಹತ್ತಿರುವರು ಇದನ್ನೆಲ್ಲ ತಹಬಂದಿಗೆ ತರಲು ಫ್ರಾಂಕೊ ಯುತ್ನಿಸುತ್ತಿರುವರು

ಸರ್ಕಾರಿ ಪರಿಶೀಲನೆ

ಬಟ್ಟೆಯು ಸರ್ವರಿಗೂ ಕ್ರಮವಾಗಿ ದೊರೆಯಲು ಅನುಕೂಲಿಸುವಂತಹ ಯೋಜನೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತಿದೆಯೆಂದು ಅಹಮದಾಬಾದ್ ವರದಿ.

ರದ್ದಾಯಿತು

ಪಂ|| ನೆಹರು ಮತ್ತು ಮೌಲಾನಾ ಆಜಾದರ ಮಾತಿಗೆ ಬೆಲೆ ಬಂದು ನಿನ್ನೆ ಡೆಹಲಿಯಲ್ಲಿ ಕಾಂಗ್ರೆಸ್ ಡೆಮೊಕ್ರಾಟಿಕ್ ಫ್ರಂಟ್ ರದ್ದಾಗುವ ನಿರ್ಧಾರಕ್ಕೆ ಬಂತು ಆ ಗುಂಪಿನವರು ಸಧ್ಯದಲ್ಲಿ ಮುಂದಿನ ತೀರ್ಮಾನಕ್ಕೆ ಬರುವರು

ಜಾತಿ ದಂಗೆ

ನಿನ್ನೆ ಮಧ್ಯಾಹ್ನ ದೋಹಾದಿನ ಜುನ ಪೇಟೆಯಲ್ಲಿ ಜಾತಿ ದಂಗೆ ಜರುಗಿತು. ನಲವತ್ತು ಅಂಗಡಿಗಳು ಭಸ್ಮವಾದವು. ಪೋಲೀಸರು ಗುಂಡು ಹಾರಿಸಲು ಕೆಲರು ಗಾಯಗೊಂಡರು

ಹಿಂಸಾ ಪ್ರಕರಣಗಳು

6716 ಹಿಂಸಾ ಪ್ರಕರಣಗಳು ಪೂರ್ವ ಪಾಕಿಸ್ತಾನದ ಅಲ್ಪಸಂಖ್ಯಾತರ ಮೇಲೆ ನಡೆದಿದೆಯೆಂದು ಪಾಕಿಸ್ತಾನಕ್ಕೆ ತಿಳಿಸಲಾಗಿದೆಯೆಂದು ದೆಹಲಿ ವಾರ್ತೆ

ಅಕ್ಕಿ ಸಾಗಾಣಿಕೆ

20 ಸಹಸ್ರ ಟನ್ ಅಕ್ಕಿ ಮಧ್ಯ ಪ್ರದೇಶದಿಂದ ಬಿಹಾರಿಗೆ ಹೋಗಲಿದೆ

ಮೈಸೂರು ಸಂಸ್ಥಾನದಲ್ಲಿ ಇದೇ 31 ರಲ್ಲಿ 11 ನೇ ಪಂಚವಾರ್ಷಿಕ ಜಾನುವಾರು ಗಣತಿ ನಡೆವುದೆಂದು ಸರ್ಕಾರಿ ಪ್ರಕಟಣೆ

ಶ್ರೀ ವಿ ಪಿ ಮೆನನರು ಸಂಸ್ಥಾನಗಳ ಸವಿೀಕರಣ ಚರಿತ್ರೆ ಬರೆಯುವರು

ನಮಗೆಲ್ಲ ಕೆಲಸ ಕೊಡದಿದ್ದರೆ ಸತ್ಯಾಗ್ರಹ ಹೂಡುವದಾಗಿ ಈಳಿಗರು ಸಾರ್ವತ್ರಿಕ ಸತ್ಯಾಗ್ರಹ ಹೂಡುವದಾಗಿ ಬೊಂಬಾಯಿ ಈಳಿಗರು ತಿಳಿಸಿದ್ದಾರೆ

ಆಯುರ್ವೇದಕ್ಕೆ ಪ್ರೋತ್ಸಾಹ

ಆಯುರ್ವೇದ ವಿದ್ಯಾಲಯಗಳಿಗೆ ಅಂದರೆ ಜೋಬಪ್ಪಯ್ಯ ಪ್ರಾಂತದಲ್ಲಿ ಹಾಕಸಿಗಿಯುವರು ಸಡೆಸುತ್ತಿರುವ ಆಯು ರ್ವೇದ ಕಾಲೇಜುಗಳಿಗೆ ಬೊಂಬಾಯಿ ಸರಕಾರದವರು ಈ ಕೆಳಗೆ ಕಂಡಂತೆ ಗ್ರಾಂಟನ್ನು ಕೊಟ್ಟಿರುತ್ತಾರೆ. ಇದು 1950 51 ನೇ ಸಾಲಿಗೆ ಕೊಟ್ಟಿರುವುದು

ಆಯುರ್ವೇದ ಮಹಾ ವಿದ್ಯಾಲಯ, ಪೂನಾ ರೂ. 28500-0-0 ಸಾಲಿನ್ ರಿಕರಿಂಗ್ ಈ ವರ್ಷ ಮಾತ್ರ. ರೂ 56400-9-0 ರಿಕರಿಂಗ್ ಪ್ರತಿವರ್ಷ.

ಶ್ರೀ ನಾ. ಆಯುರ್ವೇದ ಮಹಾ ವಿದ್ಯಾಲಯ, ಸೂರತ್ ರೂ. 30615 ನಾರ್ ರಿಕರಿಂಗ್ ಈ ವರ್ಷ ಮಾತ್ರ. ರೂ 15000 ರಿಕರಿಂಗ್ ಪ್ರತಿವರ್ಷ.

ಆರ್ಯಾಂಗ್ಲ ವೈದ್ಯಕ ಮಹಾ ವಿದ್ಯಾಲಯ, ಶಾಖಾಕರ ರೂ. 20076 ನಾನ್ ರಿಕರಿಂಗ್. ಈ ವರ್ಷ ಮಾತ್ರ. ರೂ 20900 ರಿಕರಿಂಗ್ ಪ್ರತಿವರ್ಷ

ಆಯುರ್ವೇದ ಮಹಾ ವಿದ್ಯಾಲಯ, ಅಹಮದನಗರ ರೂ. 17500 ನಾರ್ ರಿಕರಿಂಗ್. ಈ ವರ್ಷ ಮಾತ್ರ ರೂ. 15500 ರಿಕರಿಂಗ್ ಪ್ರತಿವರ್ಷ

ಆಯುರ್ವೇದ ಮಹಾ ವಿದ್ಯಾಲಯ, ನಡಿಯಾದ. ರೂ 4000 ರಿಕರಿಂಗ್ ಪ್ರತಿ ವರ್ಷ.

ಹೀಗೆ 3 ಲಕ್ಷ 10 ಸಾವಿರದ 391 ರೂಪಾಯಿಗಳನ್ನು ಸೊಬಾಯಿ ದೃಷ್ಟಿ ವನ್ನಾಗಿ ಕೊಟ್ಟಿರುತ್ತಾರೆ. ನಮ್ಮ ಮಾಡರಿ ಸರಕಾರವಾದ ಮೈಸೂರಿನಲ್ಲಿ ಏನು ಮಾಡಿದ್ದಾರೆ? ಇರುವ ಒಂದು ಸರಕಾರಿ ಆಯುರ್ವೇದ ಕಾಲೇಜಿನಲ್ಲಿ ಬಾಕಿ ಹೇಳಿಕೊಡುವ ಉಪಾಧ್ಯಾಯರಿಗೆ ಗತಿಯಿಲ್ಲ ಸರಕಾರೀ ವಿದ್ಯಾಲಯವಾ ಸ್ವಾತಂತ್ರ್ಯದ ವೇಳೆ ಅಧಿಮಾಸವಿದ್ದ ವೈದ್ಯರು ಕೆಲವರು ಯಾವ ಪ್ರತಿಫಲ ಪ್ರಾಪ್ತಿಯಲ್ಲದೇ ನಿಃಸ್ವಾರ್ಥ ಉಪಾಧ್ಯಾಯರಾಗಿ ಕೆಲಸ ನೂಡಿದ್ದಾರೆ. ಸರಕಾರದವರು ಸಂದು ವರ್ಷ ಕಾಲ ಅವರಿಂದ ಬಿಟ್ಟಿ ದುಡಿಸಿ ಮಾಡಿಸಿದ್ದಾರೆ ಇದ ಲ್ಲಿಯು ಮಾಡರಿ ಮೈಸೂರಿನ ವೈಶಿಷ್ಟ್ಯ.



"ಗೋರಕ್ಷಣ"

ಪ್ರತಿ ತಿಂಗಳಿಗೊಂದಾವರ್ತ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಶ್ರಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನಿಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

ಪುಡ್‌ಲ್ಯಾಂಡ್ಸ್ — ಬೆಳಗಿನ ಪ್ರದರ್ಶನ — 4—5—51 ರಿಂದ

ಮ್ಯಾನ್ ಹಂಟ್ ಆಫ್ ಮಿಸ್ಟ್ರಿ ಐಲೆಂಡ್

ಕೋಮಾಂಚಕ ಸೀರಿಯಲ್ ಚಿತ್ರ

Announcement

Theatre building old materials and furniture are being sold very cheap

Apply to—

NEW OPERA TALKIES

MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳು ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—

ನ್ಯೂ ಆಪೇರಾ ಟಾಕೀಸ್

ಮೈಸೂರು

ಉಡ್‌ಲಾಂಡ್

ಶಿನಿವಾರ ಏಪ್ರಿಲ್ 2 ನೇ ವಾರ

ಹನುಮಾನ್ ಪಾತಾಳ ವಿಜಯ

ಭಾಷೆ: ಮಾನಕುಮಾರಿ, ಮಹಿಪಾಲ

— ಪ್ರತಿ ದಿನ 3 ಆಟಗಳು —

ರಣಜಿತ್ ಮಂಗಳವಾರದಿಂದ 3 ನೇ ವಾರ

PARDES ಪರದೇಸ್

ಮಧುಬಾಲ, ಶೇಖಾರ್, ಶಕುಂತಲಾ, ಜಗದೀಶ ಸೇಠಿ, ಕರ್ಣ ದಿವಾನ್

ಪಾತ್ರವಹಿಸಿರುವ ಸೊಬಗಿನ ಹಿಂದಿ ಚಿತ್ರ

— ಪ್ರತಿ ದಿನ 3 ಪ್ರದರ್ಶನಗಳು —

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ಕಡಿದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠ ತೆಯ
ಹೆಗ್ಗುರುತು

ಗ್ರೈಪ್ ಸಿರಪ್

Edited, Printed and Published by M. S. Krishna Rao.
Satyavadi Press Chamarajapuram Mysore